ಪಿ ಡಬ್ಲ್ಯೂ-01

**<u>ಮಧ್ಯಂತರ ಅರ್ಜಿ ಮೇಲೆ ಆದ ಆದೇಶದಂತೆ ಸಾಕ್ಷಿದಾರರು ಹಾಜರಿದ್ದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಮಾಡಿಸಲಾಯಿತುಃ -</u>**

**<u>ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ ಓ ಸಿ ಎನ್ ವಕೀಲರಿಂದಃ-</u>**

ನನ್ನ ತಂದೆ ಸಣ್ಣಗಲ್ಲು ಹನುಮಂತಪ್ಪ ರವರಿಗೆ 4 ಜನ ಮಕ್ಕಳು. ಅವರುಗಳು ನಾಗರಾಜಪ್ಪ, ನಾನು, ಮಂಜಣ್ಣ ಹಾಗೂ ಭಾಗ್ಯಮ್ಮ. ಭಾಗ್ಯಮ್ಮ ನನ್ನ ತಂಗಿ. ನಾಗರಾಜಪ್ಪ ಮತ್ತು ಭಾಗ್ಯಮ್ಮ ರವರು ರವರು ಮೃತಪಟ್ಟಿರುತ್ತಾರೆ. ನಾಗರಾಜಪ್ಪ ರವರು ಮದುವೆಯಾಗದೇ ಮೃತಪಟ್ಟಿದ್ದರು. ಭಾಗ್ಯಮ್ಮ ರವರಿಗೆ ಇಬ್ಬರು ಮಕ್ಕಳು. ಭಾಗ್ಯಮ್ಮ ರವರ ಇಬ್ಬರು ಮಕ್ಕಳು ಮನೋಹರ ಮತ್ತು ಸೌಂದರ್ಯ. ಸದರಿ ಮನೋಹರ ರವರು ಮೃತಪಟ್ಟಿರುತ್ತಾರೆ. ಸೌಂದರ್ಯ ರವರಿಗೆ ಬಳ್ಳಾರಿಯ ಜಾಜೂರು ಗ್ರಾಮಸ್ಥನಿಗೆ ಮದುವೆ ಮಾಡಿ ಕೊಟ್ಟಿರುತ್ತಾರೆ. ಈ ದಾವೆಯಲ್ಲಿ ಭಾಗ್ಯಮ್ಮ ರವರ ಮಗಳಾದ ಸೌಂದರ್ಯ ರವರಿಗೆ ಪಾರ್ಟಿಯಾಗಿ ಮಾಡಲು ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿಯಲ್ಲ.

2. ದಾವಾ ಸ್ವತ್ತು ಐಟಂ ನಂಃ2 ಮೂಲತಃ ಸಣ್ಣಗಲ್ಲು ಹನುಮಂತಪ್ಪ ರವರಿಗೆ ಸೇರಿದ ಸ್ವತ್ತು ಎಂದು ತೋರಿಸಲು ದಾಖಲಾತಿಗಳನ್ನು ಹಾಜರುಪಡಿಸಿದ್ದಿರಾ ಎಂದರೆ ಸಾಕ್ಷಿಯು ಸದರಿ ಸ್ವತ್ತು ನನ್ನ ತಾಯಿಗೆ ಸೇರಿದ ಸ್ವತ್ತು ಎನ್ನುತ್ತಾರೆ. ದಾವಾ ಸ್ವತ್ತು ನನ್ನ ತಾಯಿಯ ಸ್ವತ್ತು ಎಂದು ತೋರಿಸಲು ದಾಖಲೆ ನೀಡಿದ್ದಿರಾ ಎಂದರೆ ಸಾಕ್ಷಿ ನಮ್ಮ ವಕೀಲರಿಗೆ ನೀಡಿದ್ದೆ ಎನ್ನುತ್ತಾರೆ.

3. ನನ್ನ ತಂದೆಯ ಮೂಲ ಸ್ಥಳ ಚಿಪ್ಪಿನಕೆರೆ. ಚಿಪ್ಪಿನಕೆರೆಯಿಂದ ಕೂನಬೇವು ಗ್ರಾಮಕ್ಕೆ ಬಂದು ಸುಮಾರು ವರ್ಷಗಳಾಗಿರುತ್ತವೆ, ಆದರೆ ನನಗೆ ನಿಖರವಾಗಿ ಗೊತ್ತಿಲ್ಲ. ನನ್ನ ತಂದೆ 2004 ಅಥವಾ 2005 ರಲ್ಲಿ ಮೃತಪಟ್ಟಿರುತ್ತಾರೆ. ನನ್ನ ತಂದೆಗೆ ಆರೋಗ್ಯ ಸ್ಥಿತಿ ಸರಿ ಇರಲಿಲ್ಲ. ನನ್ನ ತಂದೆಗೆ ಕೆಮ್ಮು ದಮ್ಮು ಜಾಸ್ತಿ ಇತ್ತು. ನಿಮ್ಮ ತಂದೆಗೆ ಎತ್ತು ಇರಿದು ತೊಡೆ

ಮತ್ತು ಕಾಲಿಗೆ ಗಾಯವಾಗಿತ್ತು ಎಂದರೆ ಸರಿಯಲ್ಲ. 2002 ನೇ ಸಾಲಿನ ಕೊನೆ ತಿಂಗಳಿನಲ್ಲಿ ನನ್ನ ತಂದೆಯ ಸೊಂಟಕ್ಕೆ ಮತ್ತು ಕಾಲಿಗೆ ಎತ್ತು ಇರಿದು ಅವರು ಓಡಾಡಲು ಆಗುತ್ತಿರಲಿಲ್ಲ ಎಂದರೆ ಸರಿಯಲ್ಲ. ವೈದ್ಯರು ಆಗ ನನ್ನ ತಂದೆಗೆ ಸಂಪೂರ್ಣವಾಗಿ ವಿಶ್ರಾಂತಿಯಲ್ಲಿರಬೇಕು (Bed-rest) ಎಂದು ಸಲಹೆ ನೀಡಿದ್ದರು ಎಂದರೆ ಸರಿಯಲ್ಲ. ಅದಕ್ಕಾಗಿ ನನ್ನ ತಂದೆ 2-3 ವರ್ಷಗಳ ಕಾಲ ಚಿಕಿತ್ಸೆ ಪಡೆದುಕೊಂಡರು ಎಂದರೆ ಸರಿಯಲ್ಲ. ಚಿಪ್ಪಿನಕೆರೆಯಲ್ಲಿರುವ ಹಳೇ ಸರ್ವೆ ನಂಃ5/2 ಹೊಸ ಸರ್ವೆ ನಂಃ5/5 ಜಮೀನು ನನ್ನ ತಂದೆಗೆ ಅವರ ತಂದೆಯಿಂದ ಬಂದ ಸ್ವತ್ತು ಇರುತ್ತದೆ. ಚಿಪ್ಪಿನಕೆರೆ ಗ್ರಾಮದಲ್ಲಿರುವ 5 ಎಕರೆ 1 ಗುಂಟೆ ಆಸ್ತಿ ಈಗ ನಮ್ಮ ಒಟ್ಟು ಕುಟುಂಬಕ್ಕೆ ಇರುವುದಿಲ್ಲ. ಸದರಿ ಜಮೀನನ್ನು ನಾವು ಮಾರಾಟ ಮಾಡಿರುತ್ತೇವೆ. ಸದರಿ ಜಮೀನನ್ನು ಯಾವ ದಿನಾಂಕ ಮತ್ತು ಇಸವಿಯಲ್ಲಿ ಮಾರಾಟ ಮಾಡಿದ್ದೇವು ಎಂದು ಹೇಳಲು ನೆನಪಿಲ್ಲ. ಸದರಿ ಜಮೀನನ್ನು ಚಿಪ್ಪಿನಕೆರೆ ಗ್ರಾಮದ ಸಣ್ಣಸೂರಮ್ಮ ಮತ್ತು ಸಣ್ಣ ಬೋರಯ್ಯ ರವರಿಗೆ 1,27,000/- ರೂಪಾಯಿಗೆ ಮಾರಾಟ ಮಾಡಿದ್ದೇವು. ಸದರಿ ಜಮೀನನ್ನು ಮಾರಾಟ ಮಾಡುವ ಸಮಯದಲ್ಲಿ ಕೂನಬೇವಿನಲ್ಲಿ ಜಮೀನನ್ನು ತೆಗೆದುಕೊಳ್ಳುವ ಸಲುವಾಗಿ ಮಾರಾಟ ಮಾಡುತ್ತಿದ್ದೇವೆ ಎಂದು ಖರೀದಿ ಪತ್ರದಲ್ಲಿ ಉಲ್ಲೇಖವಿಲ್ಲ. ಸದರಿ ಜಮೀನನ್ನು ದಿನಾಂಕಃ19/05/2003 ರಂದು ನಾನು, ನನ್ನ ತಂದೆ, ನನ್ನ ಇಬ್ಬರು ಸಹೋದರರು ಸೇರಿಕೊಂಡು ಚಿಪ್ಪಿನಕೆರೆ ಗ್ರಾಮದ ಸಣ್ಣಸೂರಮ್ಮ ಮತ್ತು ಸಣ್ಣ ಬೋರಯ್ಯ ರವರಿಗೆ ಮಾರಾಟ ಮಾಡಿದ್ದೇವು ಎಂದರೆ ಸರಿ. ಸದರಿ ಜಮೀನನ್ನು ನನ್ನ ತಂದೆಗೆ ಚಿಕಿತ್ಸೆ ಕೊಡಿಸುವ ಸಲುವಾಗಿ ಮಾರಾಟ ಮಾಡಿದ್ದೇವು ಎಂದರೆ ಸರಿಯಲ್ಲ. ಕೂನಬೇವಿನಲ್ಲಿರುವ ಜಮೀನನ್ನು ತೆಗೆದುಕೊಳ್ಳುವ ಸಲುವಾಗಿ ಚಿಪ್ಪಿನಕೆರೆ ಗ್ರಾಮದಲ್ಲಿರುವ ಜಮೀನನ್ನು ಮಾರಾಟ ಮಾಡಿದ್ದೇವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಸಾಕ್ಷಿಯ ಮುಂದುವರೆದ ಪಾಟೀ ಸವಾಲಿಗೆ ಪ್ರತಿವಾದಿಗಳ ಪರ ವಕೀಲರು ಸಮಯ ಕೋರಿದ್ದು ಕೋರಿಕೆಯ ಮೇರೆಗೆ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.**

ಪಿ ಡಬ್ಲ್ಯೂ-01

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚುಮಾಡಲಾಯಿತು}**

ಓ ಹೇ ಕೇ ಸರಿ ಇದೆ

ಪ್ರಧಾನ ಹಿರಿಯ ಸಿವಿಲ್ ಮತ್ತು ಸಿ ಜೆ ಎಂ ನ್ಯಾಯಾಧೀಶರು

ಚಿತ್ರದುರ್ಗ